# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ.ನಂ. 1817/2024**

ಫಿರ್ಯಾದಿ : ಮಿಸ್ಟಿ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ., ಕಾರವಾರ.

ವಿರುದ್ಧ

ಆರೋಪಿತರು

ಆರೋಪಿತರ ಹೆಸರು : ದೀಪಕ್ ವಿಠೋಬಾ ಪೆಡ್ನೇಕರ್,

ವಾಸ : #2707/1, ಮಹಾಸತಿ ಕಲ್ಯಾಣ ಮಂಟಪ, ಕಾಜುಬಾಗ, ಕಾರವಾರ.

## ಆಪಾದನೆ ಹೇಳಿಕೆ

ಪ್ರಸ್ತುತ ಪ್ರಕರಣದ ಆರೋಪಿತರಾದ ನೀವು ದಿನಾಂಕ 13-07-2022 ರಂದು ಫಿರ್ಯಾದಿ ಸೊಸೈಟಿಯಿಂದ ರೂ.2,60,000/- ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು ತಿಂಗಳಿನ ಕಂತಿನಲ್ಲಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದು, ಆದರೆ ನೀವು ಸಾಲವನ್ನು ಮರುಪಾವತಿಸದೇ ಇದ್ದು, ಫಿರ್ಯಾದಿಯವರು ಹಣವನ್ನು ಮರು ಪಾವತಿಸಲು ಕೇಳಿದಾಗ ನೀವು ಪಂಜಾಬ್ ನ್ಯಾಷನಲ್ ಬ್ಯಾಂಕ್, ಕಾರವಾರ ಶಾಖೆಗೆ ಸಂಬಂಧಪಟ್ಟ ಚೆಕ್ ನಂ.073673 ನ್ನು ದಿನಾಂಕ 16-05-2024 ರೂ.3,39,130/- ಎಂದು ನಮೂದಿಸಿ ನೀಡಿದ್ದು, ಫಿರ್ಯಾದಿಯು ಸದರಿ ಚೆಕ್ ನ್ನು ನಗದಿಕರಿಸಲು ಡಿ.ಬಿ.ಎಸ್. ಬ್ಯಾಂಕ್ ಇಂಡಿಯಾ ಲಿ., ಕಾರವಾರ ಶಾಖೆಗೆ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹ ನೀಡಿದ್ದು, ನಂತರ ಫಿರ್ಯಾದಿಯವರು ಹಣವನ್ನು ನೋಟಿಸ್ಸು ಮುಟ್ಟಿದ 15 ದಿನಗಳಲ್ಲಿ ಮರುಪಾವತಿಸುವಂತೆ ದಿನಾಂಕ 15-06-2024 ರಂದು ನೋಟೀಸು ನೀಡಿದ್ದು, ಆರೋಪಿತರಾದ ನೀವು ಸದರಿ ನೋಟಿಸ್ಸನ್ನು ಸ್ವೀಕರಿಸದೇ ಹಿಂತಿರುಗಿಸಿದ್ದು, ಚೆಕ್ಕಿನ ಹಣವನ್ನು ಫಿರ್ಯಾದಿಗೆ ಹಿಂದಿರುಗಿಸದೇ ಇರುವ ಕಾರಣಕ್ಕೆ ನೀವು ಕಲಂ 138 ನೆಗೋಶಿಯೇಬಲ್ ಇನ್ಸ್ಟುಮೆಂಟ್ ಆಕ್ಟ್ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧ ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆಃ 1 ಈಗ ಓದಿ ಹೇಳಿದ ಆಪಾದನೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆ: 2 ಈಗ ಓದಿ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗ ಬಯಸುತ್ತೀರೋ?

ಉತ್ತರಃ

(ಆಪಾದನೆಯನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು)

ಕಾರವಾರ
ದಿಃ 21-08-2025

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಕಾರವಾರ.